4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

ಎಸ್.ಸಿ. ಕೇಸ್ ನಂ. 118/2019

ಪ್ರಾ.ಸಾ. 20

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 05.06.2026

ಸಾಕ್ಷಿದಾರರ ಹೆಸರು	:	ಡಾ.ಪುಟ್ಟಲಿಂಗೇಗೌಡ
ತಂದೆಯ ಹೆಸರು	:	ತಮ್ಮೇಗೌಡ
ವಯಸ್ಸು	:	78 ವರ್ಷ
ಉದ್ಯೋಗ	:	ನಿವೃತ್ತ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು
ವಾಸ	:	ಮಂಡ್ಯ

ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ

.1. ನಾನು 2007 ರಿಂದ 2017 ರವರೆಗೆ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 25.12.2016 ರಂದು ರಾತ್ರಿ 10.30 ರ ಸಮಯದಲ್ಲಿ ಮುತ್ತುರಾಜು ಪಿ.ಎಸ್ ಬಿನ್ ಶಿವಣ್ಣ, ವಾಸಃ ತೊಪ್ಪನಹಳ್ಳಿ, ಮದ್ದೂರು ತಾಲ್ಲೂಕು ಇವರನ್ನು ಮಂಡ್ಯ ಪೂರ್ವ ಪೊಲೀಸ್ ಠಾಣೆಯ ಎ.ಎಸ್.ಐ ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ. ಸದರಿ ಗಾಯಾಳು ಮದ್ದೂರಿನಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಬಂದಿದ್ದರು. ಸದರಿ ಹಲ್ಲೆಯು ಅದೇ ದಿನ ಸಾಯಂಕಾಲ 6.30 ಗಂಟೆಗೆ ತೊಪ್ಪನಹಳ್ಳಿ ಗ್ರಾಮದಲ್ಲಿ ಆಗಿರುತ್ತದೆ. ಗಾಯಾಳುವನ್ನು ವಿಚಾರಿಸಿದಾಗ ಸದರಿಯವರಿಗೆ ಆರೋಪಿ 1

ರಿಂದ 3 ರವರು ಮರದ ದೊಣ್ಣೆಯಿಂದ ಹಲ್ಲೆ ಮಾಡಿರುವುದಾಗಿ ಹೇಳಿರುತ್ತಾರೆ. ನಾನು ಅವರನ್ನು ಪರೀಕ್ಷಿಸಿದಾಗ ಕೆಳಕಂಡ ಗಾಯಗಳು ಕಂಡು ಬಂದವು.

.

.1. ಹಣೆಯ ಬಲಭಾಗದಲ್ಲಿ ಊತ ಕಂಡು ಬಂತು.

.2. ಹಣೆಯ ಎಡಭಾಗದಲ್ಲಿ ಹೊಲಿದ ಮತ್ತು ಡ್ರೆಸ್ಸಿಂಗ್ ಮಾಡಿದ ಗಾಯ ಕಂಡು
. ಬಂತು.

.3. ತಲೆಯ ಎಡಭಾಗದಲ್ಲಿ ಹೊಲಿದ ಮತ್ತು ಡ್ರೆಸ್ಸಿಂಗ್ ಮಾಡಿದ ಗಾಯ ಕಂಡು
. ಬಂತು.

.4. ಗಾಯಾಳು ಎಡಮೊಣಕೈ ಹತ್ತಿರ ನೋವು ಇತ್ತು ಎಂದು ಹೇಳಿರುತ್ತಾರೆ.

3. ನಾನು ಸದರಿ ಗಾಯಾಳುವಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮೂಳೆ ತಜ್ಞರಿಗೆ ಮತ್ತು ಸಾಮಾನ್ಯ ವೈದ್ಯರಿಗೆ ಶಿಫಾರಸ್ಸು ಮಾಡಿರುತ್ತೇನೆ. ಸದರಿ ಗಾಯಾಳು ಮೂಳೆ ತಜ್ಞರಲ್ಲಿ ತೋರಿಸಿಕೊಂಡು ಬಂದ ನಂತರ ಯಾವುದೇ ವರದಿಯನ್ನು ಹಾಜರು ಪಡಿಸಿರುವುದಿಲ್ಲ. ಈ ಬಗ್ಗೆ ನಮ್ಮ ಆಸ್ಪತ್ರೆಯವರು ಮದ್ದೂರು ಆಸ್ಪತ್ರೆಯವರಿಗೆ ವೈದ್ಯಕೀಯ ಪ್ರಮಾಣ ಪತ್ರ ಕೊಡುವಂತೆ ಬರೆದ ಕೋರಿಕೆ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.38 ಎಂದು ಗುರುತಿಸಲಾಯಿತು. ನಿಪಿ.38 ರ ಮೇಲೆ ಸಾಕ್ಷಿಯ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು. ಅಪಘಾತ ಪುಸ್ತಕದ (ಎಂ.ಎಲ್.ಸಿ.) ಯಥಾಪ್ರತಿಯನ್ನು ನಿಪಿ.39 ಎಂದು ಗುರುತಿಸಲಾಯಿತು. ನಿಪಿ.38 ನನ್ನ ಕೈ ಬರಹದಲ್ಲಿ ಇರುತ್ತದೆ. ನಿಪಿ.39 ಅನ್ನು ನಮ್ಮ ಸಿಬ್ಬಂದಿಯವರು ಬರೆದಿರುತ್ತಾರೆ. ಮೇಲ್ಕಂಡ ಗಾಯಗಳು ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ .

ಪಾಟೀ ಸವಾಲುಃ ಆರೋಪಿ 1 ರಿಂದ 3 ರವರ ಪರ ಶ್ರೀ ವಿ.ಎಸ್.ಬಿ.

ವಕೀಲರಿಂದಃ

1. ಮದ್ದೂರಿನ ವೈದ್ಯಾಧಿಕಾರಿಗಳು ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಶಿಫಾರಸ್ಸು ಮಾಡಿರುವುದಿಲ್ಲ. ನಿಪಿ.39 ದಾಖಲೆಯನ್ನು ಮದ್ದೂರು ಪೊಲೀಸ್ ಠಾಣೆ ಅಪರಾಧ ಸಂಖ್ಯೆ 582/2016 ಕ್ಕೆ ಸಂಬಂಧಪಟ್ಟಂತೆ ನೀಡಲಾಗಿರುತ್ತದೆ ಎಂದು ನಮೂದಿಸಲಾಗಿದೆ. ಮದ್ದೂರು ಪೊಲೀಸ್ ಠಾಣೆ ಅಪರಾಧ ಸಂಖ್ಯೆ 582/2016 ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಂಡ್ಯ ಪೂರ್ವ ಪೊಲೀಸ್ ಠಾಣೆಯ ಅಧಿಕಾರಿಯು ಗಾಯಾಳುವನ್ನು ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ. ಮೂಳೆ ಮತ್ತು ಕೀಲು ತಜ್ಞರಿಂದ ನನಗೆ ಯಾವುದೇ ವರದಿ ಬಂದಿರುವುದಿಲ್ಲ. ಮೇಲ್ನೋಟಕ್ಕೆ ಮೂಳೆ ಮುರಿತದ ಗಾಯಗಳು ಕಂಡು ಬಂದಿರುವುದಿಲ್ಲ ಎಂದರೆ ನಿಜ. ನಿಪಿ.39 ಎಂ.ಎಲ್.ಸಿ. ಯಲ್ಲಿ ನಮೂದಿಸಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆಯೋ ಅಥವಾ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆಯೋ ಎಂದು ಹೇಳಲಾಗುವುದಿಲ್ಲ.

2. ನಾವು ಕೊಟ್ಟ ನಿಪಿ.38 ರ ಆಧಾರದ ಮೇಲೆ ಮದ್ದೂರು ಆಸ್ಪತ್ರೆಯವರು ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ನಿಜ.

ಪಾಟೀ ಸವಾಲುಃ ಆರೋಪಿ 5, 7 ರಿಂದ 14 ರವರ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ

ಶ್ರೀ ಪಿ.ಎನ್.ಕೆ ವಕೀಲರು ಶ್ರೀ ವಿ.ಎಸ್.ಬಿ. ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ.

(ಮಧ್ವೇಶ ಡಬೀರ)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.